Abstract (¸ÁgÀ¯ÉÃR)

(ಸಾರಲೇಖವು 1500 ಪದಗಳ ಮಿತಿಗೆ ಒಳಪಟ್ಟಿರಬೇಕು)

| | |
|---|---|
| **Name of the researcher (Name, institution, designation, district)** (ಸಂಶೋಧಕರ ಹೆಸರು, ಸಂಸ್ಥೆ, ಹುದ್ದೆ, ಜಿಲ್ಲೆ) | ಗೋದಾವರಿ ಪಾಟೀಲ್<br>ಉಪನ್ಯಾಸಕರು,<br>ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್),<br>ಕಮಲಾಪೂರ. ಜಿಲ್ಲಾ : ಕಲಬುರಗಿ. |
| **Title of the study** (ಅಧ್ಯಯನದ ಶೀರ್ಷಿಕೆ) | **ಆದರ್ಶ ವಿದ್ಯಾಲಯ ಹಾಗೂ ಕೆ. ಪಿ. ಎಸ್. ಶಾಲೆಗಳ ಪ್ರೌಢ ಶಾಲಾ ವಿಭಾಗಗಳಲ್ಲಿನ ಗ್ರಂಥಾಲಯಗಳ ಪರಿಣಾಮಕಾರಿ ಬಳಕೆಯ ಕುರಿತು ಒಂದು ಅಧ್ಯಯನ** |
| **Introduction/Background** (ಅಧ್ಯಯನದ ಪೀಠಿಕೆ/ಹಿನ್ನೆಲೆ) | ▸ ಶಾಲೆಯಲ್ಲಿ ಗ್ರಂಥಾಲಯಗಳು ಶಾಲಾ ಶಿಕ್ಷಣದ ಒಂದು ಭಾಗವಾಗಿವೆ. ಶಾಲಾ ಗ್ರಂಥಾಲಯಗಳು ಸ್ವತಂತ್ರ ಕಲಿಕೆಗೆ, ವ್ಯಕ್ತಿತ್ವದ ಸುಧಾರಣೆಗೆ, ಶೈಕ್ಷಣಿಕ ಅಭಿವೃದ್ಧಿಗೆ, ಕೌಶಲ್ಯ ಅಭಿವೃದ್ಧಿಗೆ, ಫಲಿತಾಂಶ ಸುಧಾರಣೆಗೆ ಸಹಾಯಕವಾಗಬಲ್ಲವುಗಳಾಗಿವೆ.<br>▸ ಶಾಲಾ ಗ್ರಂಥಾಲಯಗಳನ್ನು ಶಾಲೆಯ ಮೂಲಭೂತ ಸಂಪನ್ಮೂಲ ಎಂದು ಹೇಳುತ್ತೇವೆ.<br>▸ ಸರಕಾರವು 2018–19 ಶೈಕ್ಷಣಿಕ ವರ್ಷದಲ್ಲಿ 176 ಹಾಗೂ 2019–20 ಶೈಕ್ಷಣಿಕ ವರ್ಷದಲ್ಲಿ 100 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಕರ್ನಾಟಕದಾದ್ಯಂತ ಎಲ್.ಕೆ.ಜಿ.ಯಿಂದ ಆಂಗ್ಲ ಮಾಧ್ಯಮದ ಶಾಲೆಗಳನ್ನು ಪ್ರಾರಂಭಿಸಿದೆ.<br>▸ ಈ ಶಾಲೆಗಳ ಮೂಲಭೂತ (ಗ್ರಂಥಾಲಯವೂ ಸೇರಿದಂತೆ) ಸೌಕರ್ಯಗಳ ಅಭಿವೃದ್ಧಿಗೆ ಸಾಕಷ್ಟು ಆರ್ಥಿಕ ನೆರವು ನೀಡಲಾಗಿದೆ. ಶೈಕ್ಷಣಿಕ ಗುಣಮಟವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಈ ಕರ್ನಾಟಕ ಪಬ್ಲಿಕ್ ಶಾಲೆಗಳು ಸರಕಾರದ ಮಹತ್ವಕಾಂಕ್ಷಿ ಯೋಜನೆಗಳಾಗಿವೆ ಪ್ರಸ್ತುತ ಕಲಬುರಗಿ ಜಿಲ್ಲೆಯಲ್ಲಿ ಅಂತಹ 10 ಕರ್ನಾಟಕ ಪಬ್ಲಿಕ್ ಶಾಲೆಗಳಿವೆ. ಈ ಕೆ.ಪಿ.ಎಸ್. ಶಾಲೆಗಳಲ್ಲಿ ಗ್ರಂಥಾಲಯದ ಸಂಪನ್ಮೂಲಗಳನ್ನು ಹೇಗೆ ಬಳಕೆಯಾಗುತ್ತಿದೆ ಎಂದು ತಿಳಿಯಲು ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ.<br>▸ ಅದೇ ರೀತಿ ಪ್ರೌಢ ಶಿಕ್ಷಣದ ಅತ್ಯುನ್ನತ ಸಂಸ್ಥೆಯಾಗಿ ಸಿಬಿಇ (ಸೆಂಟ್ರಲ್ ಅಡ್ವೈಸರಿ ಬೋರ್ಡ್ ಆಫ್ ಎಜುಕೇಷನ್) ಸೆಪ್ಟಂಬರ್ 2004 ರಲ್ಲಿ ರಚನೆಯಾಗಿರುತ್ತದೆ. ಇದರ ಮೂಲ ತತ್ವವು ಪ್ರೌಢ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವುದು. ಅದರ ವರದಿಯನ್ವಯ ಆದರ್ಶ ವಿದ್ಯಾಲಯಗಳನ್ನು ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ. ಯೋಜನಾ ಆಯೋಗದ ಪ್ರಕಾರ ಆದರ್ಶ ವಿದ್ಯಾಲಯವು ಕೇಂದ್ರೀಯ ಶಾಲೆಯ ಮಾದರಿಯಲ್ಲಿ ಅಗತ್ಯವಿರುವ ಮೂಲಭೂತ (ಗ್ರಂಥಾಲಯವೂ ಒಳಗೊಂಡಂತೆ) ಸೌಕರ್ಯಗಳನ್ನು,ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಪೂರಕವಾದ ಪಠ್ಯಕ್ರಮ ಮತ್ತು ಶೈಕ್ಷಣಿಕ ವಾತಾವರಣವನ್ನು ಹೊಂದಿದ್ದಲ್ಲಿ ತನ್ನ ಕಾರ್ಯ ಕ್ಷೇತ್ರದ ವ್ಯಾಪ್ತಿಯಲ್ಲಿ ಬೇರೆ ಶಾಲೆಗಳಿಗೆ ಮಾದರಿಯಾಗಬೇಕು ಎಂಬ ಸದುದ್ದೇಶ ಹೊಂದಿದೆ. ಇದಕ್ಕಾಗಿ ಸರಕಾರವು ವಾರ್ಷಿಕವಾಗಿ ಸಾಕಷ್ಟು ಅನುದಾನ ನೀಡುವುದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಆದರ್ಶ ವಿದ್ಯಾಲಯದಲ್ಲಿ ಗ್ರಂಥಾಲಯವು ಪರಿಣಾಮಕಾರಿ ಹೇಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಯಲು ಈ ಅಧ್ಯಯನ ಕೈಗೊಳ್ಳಲಾಗಿದೆ. |
| **Rationale/importance of the study** (ಅಧ್ಯಯನದ ತಾರ್ಕಿಕತೆ/ ಪ್ರಾಮುಖ್ಯತೆ) | ▸ ಗ್ರಂಥಾಲಯಗಳು ಪ್ರತಿ ಶಾಲೆಯ ಮೂಲಭೂತ ಸಂಪನ್ಮೂಲ. ಬೋಧನೆ ಮತ್ತು ಕಲಿಕೆ ಬೆಂಬಲಿಸುವಲ್ಲಿ ಮತ್ತು ಶಿಕ್ಷಣದ ಅಂತರ ಮುಚ್ಚಲು ಗ್ರಂಥಾಲಯಗಳು ಪ್ರಮುಖ ಪಾತ್ರವಹಿಸುತ್ತವೆ.<br>▸ ಪ್ರಸ್ತುತ ಆದರ್ಶ ವಿದ್ಯಾಲಯ ಮತ್ತು ಕೆ.ಪಿ.ಎಸ್.ಶಾಲೆಗಳು ಸರಕಾರ ಬಹು ನೀರಿಕ್ಷಿತ ಶಾಲೆಗಳಾಗಿವೆ. ಈ ಶಾಲೆಗಳ ದಿನನಿತ್ಯದ ಜೀವನದಲ್ಲಿ ಗ್ರಂಥಾಲಯವು ವಿವಿಧ ರೀತಿಯ ಉದ್ದೇಶಗಳನ್ನು ಪೂರೈಸುತ್ತದೆ. |

| | |
|---|---|
| | ▶ ಶಿಕ್ಷಕರಿಗೆ ತಮ್ಮ ವೃತ್ತಿಪರ ಅಭಿವೃದ್ಧಿಗೆ ಗ್ರಂಥಾಲಯಗಳು ಬಳಸಿಕೊಳ್ಳಲು, ಮತ್ತು ಅವರ ಪಾಠ ಬೋಧನೆಯಲ್ಲಿ ಗ್ರಂಥಾಲಯದ ಪುಸ್ತಕಗಳು ಸಹಾಯ ಮಾಡುತ್ತವೆ.<br>▶ ಗ್ರಂಥಾಲಯಗಳು, ವರ್ಗ ಕೋಣೆಯಲ್ಲಿ ಆರಂಭವಾದ ಶಿಕ್ಷಣಕ್ಕೆ ಬಲವಾದ ಮತ್ತು ವಿಶಾಲವಾದ ಪರಿಕಲ್ಪನೆಯನ್ನು ನೀಡಿ ಅದನ್ನು ಪೂರ್ಣಗೊಳಿಸುತ್ತದೆ.<br>▶ ಇಷ್ಟೊಂದು ಮುಖ್ಯವಾದ ಪಾತ್ರ ನಿರ್ವಹಿಸುವ ಗ್ರಂಥಾಲಯಗಳನ್ನು ಪ್ರಸ್ತುತ ಹೇಗೆ ಬಳಸಿಕೊಳ್ಳಲಾಗುತ್ತಿದೆ ಎಂದು ತಿಳಿಯಲು ಈ ಅಧ್ಯಯನ ಕೈಗೊಳ್ಳಲಾಗಿದೆ. |
| **Research Question/Objectives**<br>(ಅಧ್ಯಯನದ ಮೂಲ ಪ್ರಶ್ನೆಗಳು/ಉದ್ದೇಶಗಳು) | 1) ಕಲಬುರ್ಗಿ ಜಿಲ್ಲೆಯ ಆದರ್ಶ ವಿದ್ಯಾಲಯ ಹಾಗೂ ಕೆ.ಪಿ.ಎಸ್. ಶಾಲೆಗಳ ಪ್ರೌಢ ಶಾಲಾ ವಿಭಾಗಗಳಲ್ಲಿನ ಗ್ರಂಥಾಲಯಗಳ ಲಭ್ಯತೆ ಮತ್ತು ಅದರ ಪರಿಣಾಮಕಾರಿಯಾಗಿ ಬಳಕೆಯನ್ನು ಅರ್ಥಮಾಡಿಕೊಳ್ಳುವುದು –<br>1, ಗ್ರಂಥಾಲಯ ಹಾಗೂ ಪುಸ್ತಕಗಳ ಲಭ್ಯತೆ,<br>2, ಬಳಕೆಯ ವಿಧಾನ ಮತ್ತು ಬಳಕೆಯ ಸಮಯ,<br>3, ಗ್ರಂಥಾಲಯ ನಿರ್ವಹಣೆ,<br>4, ಗ್ರಂಥಾಲಯ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳುವುದು.<br>2) ಗ್ರಂಥಾಲಯವನ್ನು ಇನ್ನೂ ಪರಿಣಾಮಕಾರಿಯಾಗಿ ಬಳಕೆಮಾಡಿಕೊಳ್ಳುವಲ್ಲಿ ಅನುಕೂಲವಾಗುವಂತೆ ಮುಖ್ಯಗುರುಗಳು ಮತ್ತು ಶಿಕ್ಷಕರ ಅಭಿಪ್ರಾಯವನ್ನು ತಿಳಿಯುವುದು. |
| **Research Method**<br>(ಅಧ್ಯಯನದ ವಿಧಾನ) | ಮಾದರಿ:– ಎ) ಪರಿಮಾಣಾತ್ಮಕ ಅಧ್ಯಯನಕ್ಕಾಗಿ ಕಲಬುರಗಿ ಜಿಲ್ಲೆಯ ಎಲ್ಲಾ 10 ಕೆಪಿಎಸ್ ಶಾಲೆಗಳು ಮತ್ತು ಅದರಲ್ಲಿನ 2 ಕೆಪಿಎಸ್ ಶಾಲೆಗಳಲ್ಲಿನ ಎರಡು ವಿಭಾಗಗಳು ಸೇರಿ ಒಟ್ಟು 12 ಕೆ.ಪಿ.ಎಸ್. ಶಾಲೆಗಳು ಮತ್ತು ಎಲ್ಲಾ 7 ಆದರ್ಶ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಯನಕ್ಕೆ ಒಟ್ಟು 19 ಶಾಲೆಗಳ ಗ್ರಂಥಾಲಯ ನಿರ್ವಾಹಕ ಶಿಕ್ಷಕರನ್ನು ಆಯ್ಕೆ ಮಾಡಿ, ಪ್ರಶ್ನಾವಳಿಯನ್ನು ಗೂಗಲ್ ಫಾರ್ಮನಲ್ಲಿ ತಯಾರಿಸಿ ಆನ್ ಲೈನ್ ಮೂಲಕ ಮಾಹಿತಿ ಪಡೆದುಕೊಳ್ಳಲಾಗಿದೆ.<br>ಬಿ) ಎಲ್ಲಾ 19 ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನಾ ಪಟ್ಟಿ(ಚೆಕಲಿಸ್ಟ್)ಯಲ್ಲಿ ಮಾಹಿತಿ ಪಡೆಯಲಾಗಿದೆ.<br>ಸಿ) ಗುಣಾತ್ಮಕ: ಒಟ್ಟು 15 ಶಾಲೆಗಳ ಗ್ರಂಥಾಲಯ ನಿರ್ವಾಹಕ ಶಿಕ್ಷಕರನ್ನು ಮತ್ತು 4 ಶಾಲೆಯ ಮುಖ್ಯಗುರುಗಳನ್ನು ಸಂದರ್ಶನಕ್ಕಾಗಿ ಆಯ್ಕೆ ಮಾಡಿಕೊಂಡು ಮಾಹಿತಿ ಪಡೆಯಲಾಗಿದೆ. |
| **Key Findings**<br>(ಪ್ರಮುಖ ಫಲಿತಗಳು) | ▶ ಗ್ರಂಥಾಲಯಕ್ಕೆ ಬೇಕಾಗಿರುವ ಎಲ್ಲಾ ಮೂಲಭೂತ ಸೌಲಭ್ಯಗಳು ಎಲ್ಲಾ ಆದರ್ಶ ವಿದ್ಯಾಲಯಗಳಲ್ಲಿ ಶೇಕಡಾ 100% ರಷ್ಟು ಇರುವುದು ಮತ್ತು ಶೇಕಡಾ 75% ಕೆ.ಪಿ.ಎಸ್.ಶಾಲೆಗಳಲ್ಲಿ ಶೇಕಡಾ 100% ರಷ್ಟು ಇರುವುದು ಕಂಡು ಬಂದಿದೆ.<br>▶ ಎರಡು ತರಹದ ಯಾವುದೇ ಶಾಲೆಗಳಲ್ಲಿ ತರಗತಿವಾರು ಪುಸ್ತಕಗಳಿರುವುದಿಲ್ಲಾ ಎಂದು ತಿಳಿದು ಬಂದಿದೆ. ಎಲ್ಲಾ 19 ಶಾಲೆಗಳಲ್ಲಿ ಪುಸ್ತಕಗಳನ್ನು ವ್ಯವಸ್ಥಿತವಾಗಿ,ವಿಷಯವಾರು ಇಡದೆ ಇರುವುದು ಕಂಡು ಬಂದಿದೆ.<br>▶ ಕೆ.ಪಿ.ಎಸ್.ನ ಶೇ. 8 ರಷ್ಟು ಶಾಲೆಗಳಲ್ಲಿ ಪುಸ್ತಕ ವಿತರಣಾ ವಹಿ ಇಟ್ಟಿರುವುದಿಲ್ಲಾ ಮತ್ತು ಕಳೆದ ವರ್ಷ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸಿದ ದಾಖಲೆಗಳಿರುವುದಿಲ್ಲಾ.<br>▶ ಗ್ರಂಥಾಲಯಕ್ಕಾಗಿ ಪ್ರತ್ಯೇಕ ವೇಳಾಪಟ್ಟಿ ಶೇಕಡಾ 83% ರಷ್ಟು ಕೆ.ಪಿ.ಎಸ್ ಶಾಲೆಗಳಲ್ಲಿ ಮತ್ತು ಶೇಕಡಾ 57% ರಷ್ಟು ಆದರ್ಶ ವಿದ್ಯಾಲಯಗಳಲ್ಲಿ ಇರುವುದಿಲ್ಲಾ ಎಂದು ಕಂಡು ಬಂದಿದೆ.<br>▶ ಯಾವುದೆ ಶಾಲೆಯಲ್ಲಿ ಗ್ರಂಥಪಾಲಕರು ಇರದೆ ಇದ್ದುದು ಕಂಡು ಬಂದಿದೆ.<br>▶ 2019–20 ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯ ಶಾಲೆಗಳಲ್ಲಿ 8, 9 ಮತ್ತು 10 ನೇ ತರಗತಿಯ ಒಟ್ಟು ವಿದ್ಯಾರ್ಥಿಗಳಲ್ಲಿ ಶೇಕಡಾ 21.7% ರಷ್ಟು ವಿದ್ಯಾರ್ಥಿಗಳು ಮಾತ್ರ ಪುಸ್ತಕವನ್ನು ಬಳಕೆ ಮಾಡಿಕೊಂಡಿದ್ದರೆ ಕೆ.ಪಿ.ಎಸ್ ಶಾಲೆಗಳಲ್ಲಿ ಶೆಕಡಾ 36.7%ರಷ್ಟು ವಿದ್ಯಾರ್ಥಿಗಳು ಮಾತ್ರ ಪುಸ್ತಕವನ್ನು ಬಳಕೆ ಮಾಡಿಕೊಂಡಿರುವುದು ತಿಳಿದು ಬರುತ್ತದೆ. |

| | |
|---|---|
| | ▸ ಆದರ್ಶ ಮತ್ತು ಕೆ.ಪಿ.ಎಸ್.ಶಾಲೆಗಳೆರಡರಲ್ಲಿಯೂ ಮಕ್ಕಳು ಸ್ವ ಪ್ರೇರಣೆಯಿಂದ ಗ್ರಂಥಾಲಯವನ್ನು ಬಳಸುವುದು ಬಹಳ ಕಡಿಮೆ ಎನ್ನುವುದು ತಿಳಿದು ಬರುತ್ತದೆ. ಆದರ್ಶ ವಿದ್ಯಾಲಯದಲ್ಲಿ ಗ್ರಂಥಾಲಯಕ್ಕೆ ಸಂಬಂಧಿಸಿದ ಚಟುವಟಿಕೆಗಳಿದ್ದಾಗ ಮತ್ತು ಕಾರ್ಯಕ್ರಮಗಳಿದ್ದಾಗ ಮಾತ್ರ ಶೇಕಡಾ 71% ರಷ್ಟು ಮಕ್ಕಳು ಪುಸ್ತಕಗಳನ್ನು ಬಳಸುತ್ತಾರೆ ಎಂದು ತಿಳಿಸಿದರೆ ಕೆ.ಪಿ.ಎಸ್ ಶಾಲೆಗಳಲ್ಲಿ ಶಿಕ್ಷಕರ ಸೂಚನೆ ಮೇರೆಗೆ ಶೇಕಡಾ 67% ರಷ್ಟು ಮಕ್ಕಳು ಪುಸ್ತಕವನ್ನು ಪಡೆಯುತ್ತಾರೆ ಎಂಬುದು ತಿಳಿದು ಬರುತ್ತದೆ.<br>▸ 2019–20ನೇ ಸಾಲಿನಲ್ಲಿ ಶೇಕಡಾ 17% ರಷ್ಟು ಕೆ.ಪಿ.ಎಸ್.ಶಾಲೆಗಳಲ್ಲಿ ಮತ್ತು ಶೇಕಡಾ 14% ರಷ್ಟು ಆದರ್ಶ ವಿದ್ಯಾಲಯಗಳಲ್ಲಿ ಪ್ರತಿದಿನ ವಾರಪತ್ರಿಕೆಯು ತರಿಸುವುದಿಲ್ಲಾ ಎಂದು ತಿಳಿದು ಬರುತ್ತದೆ.<br>▸ ಆದರ್ಶ ವಿದ್ಯಾಲಯಗಳಲ್ಲಿ 2760 ವಿದ್ಯಾರ್ಥಿಗಳಿದ್ದರೆ ಒಟ್ಟು ಪುಸ್ತಕಗಳ ಸಂಖ್ಯೆ 5989 ಇರುತ್ತವೆ. ಹಾಗೆಯೇ ಕೆ.ಪಿ.ಎಸ್. ಶಾಲೆಗಳಲ್ಲಿ 1487 ಮಕ್ಕಳಿದ್ದರೆ 17803 ಪುಸ್ತಕಗಳು ಇರುತ್ತವೆ.<br>▸ ಶಾಲೆಯಲ್ಲಿ ಲಭ್ಯವಿರುವ ಈ ಒಟ್ಟು ಪುಸ್ತಕಗಳಲ್ಲಿ ಶೇ. 7 ರಷ್ಟು ಪುಸ್ತಕಗಳು ಮಾತ್ರ ವಿದ್ಯಾರ್ಥಿಗಳು ಬಳಸಿರುತ್ತಾರೆ. ಮತ್ತು ಒಟ್ಟು ಮಕ್ಕಳಲ್ಲಿ ಶೇ.27 ರಷ್ಟು ಮಕ್ಕಳು ಮಾತ್ರ ಪುಸ್ತಕ ಪಡೆದಿರುತ್ತಾರೆ ಎಂದು ತಿಳಿದು ಬರುತ್ತದೆ. ಆದರ್ಶ ಶಾಲೆಗಳಿಗಿಂತ ಕೆ.ಪಿ.ಎಸ್.ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಮತ್ತು ಪುಸ್ತಕಗಳ ಸಂಖ್ಯೆ ಹೆಚ್ಚಿರುವುದು ಕಂಡು ಬಂದಿದೆ. ಅದರಂತೆ ವಿದ್ಯಾರ್ಥಿಗಳ ಬಳಕೆಯ ಪ್ರಮಾಣ ಮತ್ತು ಎರವಲು ಪಡೆದಿರುವುದು ಆದರ್ಶಕ್ಕಿಂತ ಕೆ.ಪಿ.ಎಸ್.ಶಾಲೆಗಳಲ್ಲಿ ಹೆಚ್ಚಾಗಿರುವುದು ಕಂಡು ಬರುತ್ತದೆ. |
| **Important Recommendations**<br>(ಪ್ರಮುಖ ಶಿಫಾರಸ್ಸುಗಳು) | ▸ ಶಾಲಾ ಗ್ರಂಥಾಲಯಕ್ಕೆ ಬೇಕಾದ ಪ್ರತ್ಯೇಕವಾದ ಗಾಳಿ, ಬೆಳಕು ಇರುವ ಕೋಣೆ, ಪಿಠೋಪಕರಣಗಳು, ಅಲಮಾರಾಗಳು ಮುಂತಾದ ಕನಿಷ್ಟ ಸೌಲಭ್ಯಗಳಿರಬೇಕು.<br>▸ ಎಲ್ಲಾ ಶಾಲೆಗಳಲ್ಲಿ ಪುಸ್ತಕಗಳನ್ನು ಖರೀದಿಸುವ ಸಮಿತಿ ಇರಬೇಕು ಮತ್ತು ಆ ಸಮಿತಿಯಲ್ಲಿ ಕಲಿಯುವವರು ಮತ್ತು ಕಲಿಸುವವರನ್ನು ಸದಸ್ಯರಾಗಿ ತೆಗೆದುಕೊಳ್ಳಬೇಕು.<br>▸ ಶಿಕ್ಷಕರಿಗೆ ಆಕರ ಗ್ರಂಥಗಳು ಮತ್ತು ತರಗತಿಗೆ ಅನುಗುಣವಾಗಿ ಪುಸ್ತಕ ಖರೀದಿಸಬೇಕು<br>▸ ಎಲ್ಲಾ ಶಾಲೆಗಳಲ್ಲಿ ಗ್ರಂಥಪಾಲಕರು ಇರಬೇಕು. ಒಂದು ವೇಳೆ ಗ್ರಂಥಪಾಲಕರು ಇಲ್ಲದಿದ್ದರೆ ಗ್ರಂಥಾಲಯ ನಿರ್ವಹಿಸುವ ಶಿಕ್ಷಕರಿಗೆ ಗ್ರಂಥಾಲಯ ನಿರ್ವಹಣೆ ಬಗ್ಗೆ ತರಬೇತಿ ನೀಡಬೇಕು.<br>▸ ವೇಳಾಪಟ್ಟಿಯಲ್ಲಿ ಗ್ರಂಥಾಲಯಕ್ಕಾಗಿ ವಾರಕ್ಕೆ ಒಂದು ಅವಧಿಯಾದರು ಕಡ್ಡಾಯವಾಗಿ ಮೀಸಲಿಡಬೇಕು.(ಎನ್.ಸಿ.ಎಫ್.2005)ಶಾಲಾ ಅವಧಿಯ ನಂತರವೂ ಮತ್ತು ರಜಾ ಅವಧಿಯಲ್ಲಿ ಗ್ರಂಥಾಲಯ ತೆರದಿಬೇಕು.<br>▸ ಗ್ರಂಥಾಲಯಕ್ಕಾಗಿ ಬಂದ ಅನುದಾನ ಅದೇ ಉದ್ದೇಶಕ್ಕಾಗಿ ಸಂಪೂರ್ಣ ಬಳಕೆಯಾಗಬೇಕು.<br>▸ ಗ್ರಂಥಾಲಯಕ್ಕೆ ಸಂಬಂಧಿಸಿದ ಚಟುವಟಿಕೆಗಳು ಶಾಲೆಗಳಲ್ಲಿ ಹೆಚ್ಚಾಗಬೇಕು.<br>▸ ಎಲ್ಲಾ ರಾಷ್ಟೀಯ ಹಬ್ಬಗಳಂತೆ ಗ್ರಂಥಾಲಯದ ಪುಸ್ತಕ ಬಳಕೆಯ ಹಬ್ಬ ಆಚರಿಸಬೇಕು.<br>▸ ಶಾಲೆಯ ಗ್ರಂಥಾಲಯದಲ್ಲಿನ ಹೆಚ್ಚು ಪುಸ್ತಕ ಓದಿ ಅದರ ಬಗ್ಗೆ ಪರಾಮರ್ಶೆ ಮಾಡಿ, ಅದರ ಸಾರವನ್ನು ವಿವರಿಸಿದ ಮಕ್ಕಳಿಗೆ ವರ್ಷಾಂತ್ಯಕ್ಕೆ ಬಹುಮಾನ ಘೋಷಿಸಬೇಕು.<br>▸ ಡಿಜಿಟಲ್ ಗ್ರಂಥಾಲಯ ಸ್ಥಾಪಿಸಬೇಕು. ಅಂದರೆ ಆಡಿಯೋ, ವೀಡಿಯೊ, ಇ–ಪುಸ್ತಕ, ಇ–ಮ್ಯಾಗಜಿನ್ ,ಇ–ಪತ್ರಿಕೆಗಳು, ವಿದ್ಯುನ್ಮಾನ ಮಾಧ್ಯಮದಲ್ಲಿ ಸಿಗುವಂತಾಗಬೇಕು<br>▸ ಕ್ಲಸ್ಟರ್ (ಶಾಲಾ ಸಂಕುಲ) ಮಾದರಿಯಲ್ಲಿ ಗ್ರಂಥಾಲಯ ಬಳಕೆಯಾಗಬೇಕು |

| | |
|---|---|
| **Conclusion**<br>(ಉಪಸಂಹಾರ) | ▶ ಗ್ರಂಥಾಲಯಗಳು ಶಾಲೆಯ ಆತ್ಮವಿದ್ದಂತೆ. ಬೋಧನೆ ಮತ್ತು ಕಲಿಕೆಯಲ್ಲಿ ಅದರ ಪಾತ್ರ ಮಹತ್ವದ್ದಾಗಿದೆ. ಮೂಲಭೂತ ಸೌಲಭ್ಯಗಳ ಕೊರತೆ, ಪುಸ್ತಕಗಳ ಕೊರತೆ, ಸಿಬ್ಬಂದಿಯ ಕೊರತೆ ಒಂದಡೆಯಾದರೆ ಎಷ್ಟೋ ಶಾಲೆಗಳಲ್ಲಿ ಉತ್ತಮ ಗ್ರಂಥಾಲಯ ಮತ್ತು ಗ್ರಂಥಗಳಿವೆ. ಆದರೆ ಅವುಗಳನ್ನು ವಿದ್ಯಾರ್ಥಿಗಳಿಗೆ ಕೊಡುವ ವ್ಯವಸ್ಥೆ ಸರಿಯಿರುವುದಿಲ್ಲಾ. ಹೀಗಾದರೆ ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿಯು ಬೆಳೆಯಲಾರದು. ವಾಚನಾಭಿರುಚಿ ಇಲ್ಲದಿದ್ದರೆ ಅವರ ಜ್ಞಾನವು ಬೆಳೆಯಲಾರದು.<br>▶ ಗ್ರಂಥಾಲಯದ ಉಪಯೋಗಕ್ಕೆ ಅರ್ಥ ಬರುವುದು ವಿದ್ಯಾರ್ಥಿಗಳಿಂದ ಗರಿಷ್ಟ ಪ್ರಮಾಣದಲ್ಲಿ ಅದರ ಬಳಕೆಯಾದಾಗ. ಇಲ್ಲದಿದ್ದರೆ ಅದು ವ್ಯರ್ಥವಾದಷ್ಟು ಒಳ್ಳೆಯದೆ ಎಂದು ಎಲಾಟುರೊಟಿ (1993) ಅಭಿಪ್ರಾಯಪಟ್ಟಿದ್ದಾರೆ. ಪರಿಣಾಮಕಾರಿ ಶಾಲಾ ಗ್ರಂಥಾಲಯಗಳು ವಿದ್ಯಾರ್ಥಿಗಳಿಗೆ ಹೆಚ್ಚುವರಿ ಓದುವ ಅವಕಾಶಗಳನ್ನು ಒದಗಿಸಿ ಅವರ ಜ್ಞಾನವನ್ನು  ಬೆಂಬಲಿಸುತ್ತವೆ ಎಂದು ಹೇಳಬಹುದು.<br>▶ ಪುಸ್ತಕಗಳು ಸುಮ್ಮನೆ ಹುಳು ಹತ್ತಿ ನಾಶವಾಗುವ ಬದಲು ವಿದ್ಯಾರ್ಥಿಗಳು ಬಳಸಿ ಹಾಳಾದರೆ ಅದು ಸಾರ್ಥಕ. ಶಿಕ್ಷಕರೆ ಸ್ವತಹ ಪುಸ್ತಕ ಬಳಸಿದ ದಾಖಲೆಗಳು ಇರುವುದಿಲ್ಲಾ. ಶಿಕ್ಷಕರು ಸಹ ಗ್ರಂಥಾಲಯದ ಸಂಪೂರ್ಣ ಉಪಯೋಗ ಮಾಡಿಕೊಳ್ಳಬೇಕು.<br>▶ ಎನ್.ಇ.ಪಿ.2020ಯ ಶಿಫಾರಸಿನಲ್ಲಿ ಗ್ರಂಥಾಲಯ ನಿರ್ವಹಣೆ ಮಾಡುವ ಶಿಕ್ಷಕರಿರಲಿ ಅಥವಾ ಗ್ರಂಥಪಾಲಕರಿರಲಿ ಅವರು ಸೇವಾ ಮನೋಭಾವವನ್ನು ಹೊಂದಲು ಒತ್ತು ನೀಡುತ್ತದೆ.<br>▶ ಅವರುಗಳು ನಿರಂತರ ವೃತ್ತಿಪರ ಅಭಿವೃದ್ಧಿ, ಧನಾತ್ಮಕ ವಾತಾವರಣದೊಂದಿಗೆ ಕಲಿಕೆಯ ಪ್ರಕ್ರಿಯೆಯಲ್ಲಿ ಸಹಯೋಗ ನೀಡಬೇಕು ಎಂದು ಹೇಳುತ್ತದೆ.<br>▶ ಈ ದಿಸೆಯಲ್ಲಿ ಗ್ರಂಥಾಲಯಗಳ ಸಂಪನ್ಮೂಲಗಳ ಸಂಪೂರ್ಣ ಬಳಕೆಯಾಗುವಲ್ಲಿ ಶಾಲೆಯ ಮುಖ್ಯಗುರುಗಳು ಮತ್ತು ಶಿಕ್ಷಕರು ಪ್ರಯತ್ನಿಸಬೇಕು. ಮನಸ್ಸಿದ್ದರೆ ಮಾರ್ಗ ಎಂಬಂತೆ ಇಲಾಖೆಯ ಜ್ಞಾಪನದಂತೆ ಪುಸ್ತಕ ಪ್ರದರ್ಶನ, ತೆಗೆ ಪುಸ್ತಕ ಹೊರಗೆ, ಓದುವ ಬೆಳಕು ಎಂಬ ಮುಂತಾದ ಕಾರ್ಯಕ್ರಮಗಳು ಆಚರಣೆಗಳನ್ನು ಬಲಪಡಿಸುವಂತೆ ಮಾಡಬೇಕು. |